# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00ಲಕ್ಷಗಳಿಂದ ರೂ.12.00ಲಕ್ಷಗಳಿಗೆ ಹೆಚ್ಚಿಸುವ ಕುರಿತು.

**ಓದಲಾಗಿದೆ**: ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹಿನಿ/ಆ.ವ್ಯ.ಯೋ/ಸಿ14/96/2021-22/1220, ದಿನಾಂಕ: 07.10.2021.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಇವರು ಇತ್ತೀಚಿನ ದಿನಗಳಲ್ಲಿ ಆಹಾರ ಪದಾರ್ಥಗಳು, ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು, ಜೀವನ ನಿರ್ವಹಣಾ ವೆಚ್ಚಗಳು ದುಬಾರಿಯಾಗಿದ್ದು, ಪ್ರಸ್ತುತ ವೃದ್ಧಾಶ್ರಮಗಳ ನಿರ್ವಹಣೆಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನ ರೂ.8.00 ಲಕ್ಷಗಳಲ್ಲಿ ವೃದ್ಧಾಶ್ರಮವನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದ್ದು, ಅಲ್ಲದೆ ಕೇಂದ್ರ ಸರ್ಕಾರವು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ 25 ವೃದ್ಧರ ವೃದ್ಧಾಶ್ರಮ ಒಂದಕ್ಕೆ ರೂ.21.00 ಲಕ್ಷಗಳ ವಾರ್ಷಿಕ ಅನುದಾನ ನೀಡುತ್ತಿದ್ದು, ಅದರಂತೆಯೇ ರಾಜ್ಯ ಸರ್ಕಾರದ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ನೀಡುವಂತೆ ಮನವಿ ಸಲ್ಲಿಸುತ್ತಿದ್ದು, ರಾಜ್ಯದ 52 ಕಂದಾಯ ಉಪವಿಭಾಗಗಳಲ್ಲಿ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದ್ದಾಗ್ಯೂ ಕೇವಲ 9 ಸ್ವಯಂ ಸೇವಾ ಸಂಸ್ಥೆಗಳಿಗೆ ಮಾತ್ರ ಮಂಜೂರಾತಿ ದೊರೆತು ಪ್ರಾರಂಭಿಸಲಾಗಿದ್ದು, ಕಡಿಮೆ ಅನುದಾನ ನಿಗದಿಯಾಗಿರುವುದರಿಂದ ಯಾವೊಂದು ಸಂಸ್ಥೆಯು ವೃದ್ಧಾಶ್ರಮವನ್ನು ಪ್ರಾರಂಭಿಸಲು ಮುಂದೆ ಬರುತ್ತಿಲ್ಲವಾದ್ದ ಕಾರಣ ಪ್ರಸ್ತುತ ವೃದ್ಧಾಶ್ರಮಕ್ಕೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ಕನಿಷ್ಠ ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವಂತೆ ಮಾನ್ಯ ಮುಖ್ಯಮಂತ್ರಿಯವರನ್ನು ಕೋರಲಾಗಿದ್ದು, ದಿನಾಂಕ: 01.10.2021ರಂದು ಬೆಂಗಳೂರಿನಲ್ಲಿ ನಡೆದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ವಲಯದಡಿ ಜಿಲ್ಲಾ ಪಂಚಾಯತ್ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವುದಾಗಿ ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ವಲಯದಡಿ (ಜಿಲ್ಲಾ ಪಂಚಾಯತ್ ಮೂಲಕ) ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳ ನಿರ್ವಹಣೆಗೆ ಪ್ರಸ್ತುತ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವ ಅಗತ್ಯತೆಯಿದ್ದು, ವೃದ್ಧಾಶ್ರಮ ನಿರ್ವಹಣೆಗೆ ಬೇಕಾಗುವ ವಾರ್ಷಿಕ ಆಯವ್ಯಯದ ತಃಖ್ತೆ, ತಡೆಪಟ್ಟಿ ಹಾಗೂ ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಸಲ್ಲಿಸುತ್ತ ಈ ಪತ್ರದೊಂದಿಗೆ ಲಗತ್ತಿಸುತ್ತಾ, ಆಡಳಿತಾತ್ಮಕ ಮಂಜೂರಾತಿ ಮತ್ತು ಯೋಜನೆಯ ಅನುಷ್ಠಾನಕ್ಕೆ ತಗಲುವ ಹೆಚ್ಚುವರಿ ಆಯವ್ಯಯ ರೂ.221.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2235-00-10-0-30, (ಲೆಕ್ಕಶೀರ್ಷಿಕೆ 2235-02-196-1-03 ಜಿಲ್ಲಾ ಪಂಚಾಯತ್ ವಲಯದಡಿ lump sum) ರಡಿ 2021-22ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 242 ಪಿಹೆಚ್‌ಪಿ(ಇ) 2021, ದಿನಾಂಕ:26.09.2022**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮವೊಂದಕ್ಕೆ ಭರಿಸಬಹುದಾದ ಆವರ್ತಕ ವೆಚ್ಚಗಳು ಮತ್ತು

ಇತರೆ ವೆಚ್ಚಗಳಿಗೆ ಅನುಬಂಧದಲ್ಲಿ ವಿವರಿಸಿರುವಂತೆ ರೂ.8.00 ಲಕ್ಷಗಳಿಂದ ರೂ.12.00 ಲಕ್ಷಗಳಿಗೆ (ರೂಪಾಯಿ ಹನ್ನೆರಡು ಲಕ್ಷಗಳು ಮಾತ್ರ) ಹೆಚ್ಚಿಸಿದೆ.

ಈ ಹಿಂದೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಹಾಗೂ ಸರ್ಕಾರ / ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆದೇಶ / ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು, ಹಾಗೂ ಈ ವೆಚ್ಚವನ್ನು 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2235-00-10-0-30, (ಲೆಕ್ಕಶೀರ್ಷಿಕೆ 2235-02-196-1-03 ಜಿಲ್ಲಾ ಪಂಚಾಯತ್ ವಲಯದಡಿ lump sum) ರಡಿ ಭರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 380 ವೆಚ್ಚ-10/2021, ದಿನಾಂಕ: 14.09.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

G. H. Sarojamma 26/09/2022
(ಜಿ.ಹೆಚ್. ಸರೋಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

**ಪ್ರತಿಗಳು:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ವಿ.ವಿ.ಗೋಪುರ, ಪೋಡಿಯಂ ಬ್ಲಾಕ್, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10) ವಿಧಾನಸೌಧ, ಬೆಂಗಳೂರು.
8. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ-1

ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00ಲಕ್ಷಗಳಿಂದ ರೂ.12.00ಲಕ್ಷಗಳಿಗೆ ಹೆಚ್ಚಿಸಲು ಬೇಕಾಗುವ ಅಂದಾಜು ಆಯವ್ಯಯ

| ಪ್ರಸ್ತುತ ನೀಡುತ್ತಿರುವ ಅನುದಾನದ ಮೊತ್ತ | | | | | ಜಿಲ್ಲಾ ವಲಯದಡಿ ಜಿಲ್ಲಾ ಪಂಚಾಯತ್ ಮೂಲಕ ವೃದ್ಧಾಶ್ರಮದ ನಿರ್ವಹಣೆಗೆ ರೂ.12.00 ಲಕ್ಷಗಳಿಗೆ ಸರಿದೂಗಿಸಿದ ಅನುದಾನ | | ಷರಾ |
|---|---|---|---|---|---|---|---|
| **I ಆವರ್ತಕ ವೆಚ್ಚಗಳು** | | | | | | | |
| ಅ. ಸಿಬ್ಬಂದಿಗಳ ಗೌರವಧನ | | | | | | | |
| | ವಿವರ | ಸಿಬ್ಬಂದಿ ಸಂಖ್ಯೆ | ಮಾಸಿಕ ನೀಡುವ ಮೊತ್ತ | ಒಟ್ಟು ಮೊತ್ತ | ಮಾಸಿಕ ನೀಡುವ ಮೊತ್ತ | ಮೊತ್ತ | |
| 1 | ಅಧೀಕ್ಷಕರು/ವಾರ್ಡನ್ | 1 | 9000*1*12 | 108000 | 12000*1*12 | 144000 | |
| 2 | ಸಮಾಜ ಸೇವಕರು | 1 | 8500*1*12 | 102000 | 10000*1*12 | 120000 | |
| 3 | ದಾದಿ/ಮಿಡ್‌ವೈಫ್ | 1 | 6500*1*12 | 78000 | 8000*1*12 | 96000 | |
| 4 | ಅಡುಗೆಯವರು | 1 | 5000*1*12 | 60000 | 6000*1*12 | 72000 | |
| 5 | ಸಹಾಯಕರು | 1 | 4000*1*12 | 48000 | 5000*1*12 | 60000 | |
| 6 | ಕಾವಲುಗಾರರು | 1 | 4000*1*12 | 48000 | 5000*1*12 | 60000 | |
| 7 | ಅರೆಕಾಲಿಕ ವೈದ್ಯರು | 1 | 500*4*12 | 24000 | 750*4*12 | 36000 | |
| | **ಒಟ್ಟು ಗೌರವಧನ** | | | **468000** | | **588000** | |
| **ಆ ಕಟ್ಟಡ ಬಾಡಿಗೆ / ನಿರ್ವಹಣೆ** | | | | | | | |
| 1 | ಕಟ್ಟಡದ ಬಾಡಿಗೆ | – | 5000*12 | 60000 | 10000*1*12 | 120000 | |
| | **ಒಟ್ಟು** | | | **60000** | | **120000** | |
| **ಇ ಇತರೆ ವೆಚ್ಚಗಳು** | | | | | | | |
| 1 | ಊಟದ ವೆಚ್ಚ | – | 25*35*365 | 320000 | 25*50*365 | 456250 | ರೂ.4,56,250 /- ಗಳನ್ನು ರೂ.4,56,000/- ಗಳಿಗೆ ಪೂರ್ಣಾಂಕ ಗೊಳಿಸಿದೆ |
| 2 | ಔಷಧಿ ವೆಚ್ಚ | – | 25*40*12 | 12000 | 25*60*12 | 18000 | ರೂ. 5,25,250/- ಗಳನ್ನು ರೂ.5,25,000/- ಗಳಿಗೆ ಪೂರ್ಣಾಂಕ ಗೊಳಿಸಿದೆ |
| 3 | ಬಟ್ಟೆ, ಎಣ್ಣೆ, ಸೋಪು ಇತ್ಯಾದಿ | – | 25*40*12 | 12000 | 25*60*12 | 18000 | |
| 4 | ವಿದ್ಯುತ್, ನೀರು ಮತ್ತು ಅನಿವಾರ್ಯ ವೆಚ್ಚಗಳು | – | – | 10000 | 25*60*12 | 18000 | |
| 5 | ಮನೋರಂಜನಾ ವೆಚ್ಚಗಳು | – | – | 7000 | 25*50*12 | 15000 | |
| | **ಒಟ್ಟು** | | | **361000** | | **525250** | |
| **II ಅನಾವರ್ತಕ ವೆಚ್ಚಗಳು** | | | | | | | |
| 1 | ಮಂಚಗಳು | | – | – | 1000*25 | 25000 | |
| 2 | ಹಾಸಿಗೆ ಮತ್ತು ಹೊದಿಕೆಗಳು | | – | – | 1000*25 | 25000 | |
| 3 | ಪಾತ್ರೆಗಳು | | – | – | 12000*1 | 12000 | |
| 4 | ಪೀಠೋಪಕರಣಗಳು ಮತ್ತು ಇತರೆ ಸಾಮಗ್ರಿಗಳು | | – | – | 25000*1 | 25000 | |
| 5 | ನ್ಯೂಕ್ಲಿಯಸ್ ಫಂಡ್ | | – | – | 13500*1 | 13500 | |
| | | | **ಒಟ್ಟು** | | | **100500** | |
| | | | **ಒಟ್ಟು (I + II) ರೂ.** | **889000** | | **1333750** | |
| | | | **ಸಂಸ್ಥೆಯ ವತಿಯಿಂದ ಭರಿಸಬೇಕಾದ ಶೇ.10ರಷ್ಟು ಅನುದಾನ** | **88900** | | **(–)133375** | |
| | | | **ಪ್ರಥಮ ವರ್ಷ ನೀಡುವ ನಿವ್ವಳ ಅನುದಾನದ ಮೊತ್ತ** | **800100** | | **1200375** | **ರೂ.12,00,375 /- ಗಳನ್ನು ರೂ.12,00,000/- ಗಳಿಗೆ ಪೂರ್ಣಾಂಕ ಗೊಳಿಸಿದೆ** |
| | | | **ರೂ. 800100/-ಗಳನ್ನು ರೂ.800000/-ಗಳಿಗೆ ಪೂರ್ಣಾಂಕಗೊಳಿಸಿದೆ** | **800000** | | | |